ಇದರ ಉಪಯೋಗ ದಿನದಲ್ಲಿ ಒಂದರಿಂದ ಹಲವು ಬಾರಿ ಆಗುತ್ತಿತ್ತು. ಅಂದರೆ, ಆ ಮನೆಯಲ್ಲಿ ಮಡಿ ಬಟ್ಟೆಯುಡುವ ಮಡಿವರ್ಗದವರು ಎಷ್ಟು ಜನರೋ ಅಷ್ಟು ಬಾರಿ. ಸ್ವಲ್ಪ ಗೊಂದಲದ ಲೆಕ್ಕಾಚಾರ ಎನಿಸುತ್ತದೆಯೇ? ಗೊಂದಲವೇನಿಲ್ಲ. ಹಿಂದೆಲ್ಲಾ ದಿನನಿತ್ಯ ಉಡುವ ಸೀರೆ ಪಂಚೆಗಳನ್ನು ಇಟ್ಟುಕೊಳ್ಳಲು ಬೀರು ಗೀರು ವಾರ್ಡ್‌ರೋಬ್ ಅಂತೆಲ್ಲಾ ಏನೂ ವ್ಯವಸ್ಥೆ ಇರ್ತಿರಲಿಲ್ಲ. ಬೀರು ತುಂಬುವಷ್ಟು ಬಟ್ಟೆ ಇರುತ್ತಿದ್ದರಲ್ಲವೇ ಬೀರೂಗೆ ಕೆಲಸ. ಹಲವರ ಬಳಿ ಕೋಲ್ ಮೇಲೊಂದು ಮೈಮೇಲೊಂದು ಅನ್ನವಷ್ಟೇ ವಾರ್ಡ್‌ರೋಬ್ ಕಲೆಕ್ಷನ್. ಅಪರೂಪಕ್ಕೆ ಕೆಲವರ ಬಳಿ ಸ್ವಲ್ಪ ಹೆಚ್ಚು ದಿನದ ಬಟ್ಟೆಗಳು, ರೇಶ್ಮೆಯ ಸೀರೆ ಮಗುಟಗಳು ಇರ್ತಿದ್ದವು. ಅವಕ್ಕೆ ಮಡಿಕೋಲಿನ ಸಂಪರ್ಕ ಬರ್ತಾ ಇರಲಿಲ್ಲ. ಏಕೆಂದರೆ, ಅವೆಲ್ಲಾ 'ಸ್ವತಃ ಪ್ರಮಾಣ' ಎಂಬಂತೆ ಸ್ವತಃ ಮಡಿಗಳು. ಹುಟ್ಟುಮಡಿಗಳು. ಹಾಗಾಗಿ, ಮಿಕ್ಕ ಹತ್ತಿ ಸೀರೆ ಪಂಚೆಗಳಂತೆ ನೆನೆಸಿಕೊಂಡು, ಹಿಂಡಿಸಿಕೊಂಡು, ಅಡುಗೆಮನೆಯ ಹೊಗೆಹಿಡಿದ ಜಂತಿ ಸೂರುಗಳಿಗೆ ಕಟ್ಟಿದ ಗಳುವಿನಲ್ಲಿ ಬೆಂತರಪಿಶಾಚಿಗಳಂತೆ ತೂಗುತ್ತಾ ಇರಬೇಕಾದ, ಮಡಿಕೋಲಿನಿಂದ ಚುಚ್ಚಿ ಎಳೆದು ಕೆಳಗಿಳಿಯಬೇಕಾದ ಕಾಟ ಇರ್ತಾ ಇರಲಿಲ್ಲ. ಅವು ಲಕ್ಷಣವಾಗಿ ಮಡಚಿ ಬೆಚ್ಚಗೆ ಪೆಟ್ಟಿಗೆಯಲ್ಲೋ, ಬುಟ್ಟಿಯಲ್ಲೋ ಮಲಗಿದ್ದು, ಬೇಕೆಂದಾಗ ಮಾತ್ರ ಹೊರಬಂದು ತಮ್ಮ ತಮ್ಮ ಒಡೆಯ ಒಡತಿಯರ ಮೈಗಳನ್ನ ಅಲಂಕರಿಸಿ ಬೀಗುತ್ತಿದ್ದವು. ಆದರೆ, ದಿನನಿತ್ಯದ ನೂಲಿನ ಸೀರೆ ಪಂಚೆಗಳ ಕಥೆ ಹಾಗಲ್ಲ. ದಿನವೂ ಒಗೆದು ಮಡಿ ಹರವ ಬೇಕಾಗುತ್ತಿತ್ತು. ಹೀಗೆ ಹರವಿದ ಮಡಿಯನ್ನೇ ಉಟ್ಟು ಅಡುಗೆ ಕೆಲಸ, ದೇವರ ಕೆಲಸ ಮೊದಲಾದವುಗಳನ್ನು ಮಾಡಲೇ ಬೇಕಾದ ಅನಿವಾರ್ಯ ಆ ದಿನಗಳಲ್ಲಿದ್ದವು. ಜಳಕ ಮಾಡಿ ಬಂದವರು ತಾವೇ ಮೇಲೆ ಗಳುವಿನಲ್ಲಿ ಹರವಿರುವ ಮಡಿ ಬಟ್ಟೆಗಳನ್ನು ಎಳೆದು ಕೊಂಡು ಉಟ್ಟು ಮುಂದಿನ ಕೆಲಸಕ್ಕೆ ಹೊರಡಬೇಕಾಗುತ್ತಿತ್ತು. ಕೂಡು ಕುಟುಂಬಗಳಿದ್ದ ಕಾಲದಲ್ಲಿ ಒಂದೊಂದು ಮನೆಯಲ್ಲಿ ಕಡಿಮೆಯೆಂದರೂ, ಈ ಮಡಿ ಉಡುವವರ ಸಂಖ್ಯೆ ಮೂರ್ನಾಲ್ಕಾದರೂ ಇರುತ್ತಿತ್ತು. ಹಾಗಾಗಿ, ಒಬ್ಬೊಬ್ಬರೂ ತಮಗೆ ಬೇಕಾದಾಗ ಈ ಮಡಿಕೋಲನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಇದನ್ನೇ ನಾನು ಹೇಳಿದ್ದು ಎಷ್ಟು ಜನವೋ ಅಷ್ಟು ಬಾರಿ ಇದರ ಉಪಯೋಗ ಎಂದು. ಉಪಯೋಗದ ನಂತರ ಅದನ್ನು ಅದರ ಸ್ವಸ್ಥಾನವಾದ ಬಾಗಿಲಿನ ಹಿಂದಕ್ಕೆ ಸೇರಿಸಿ ಬಿಡಬೇಕು. ಇದು ಅಲಿಖಿತ ನಿಯಮದಂತೆ ನಡೆಯುತ್ತಿತ್ತು. ಅದನ್ನು ಹಿಡಿದವರ ಕೈ ತನ್ನಿಂದ ತಾನೇ ಅಭ್ಯಾಸಬಲವೋ ಎಂಬಂತೆ ಆ ಕೆಲಸ ಮಾಡಿ ಬಿಡುತ್ತಿತ್ತು. ಆದರೂ ಒಮ್ಮೊಮ್ಮೆ ಅದು ಅಲ್ಲಿರುತ್ತಿರಲ್ಲಿಲ್ಲ. ಆಗ ಅಲ್ಲಿ ಬಟ್ಟೆ ಹಾಕಿಕೊಳ್ಳಲು ನಿಂತ ಹೆಂಗಸರ ಪಾಡು ಬೇಡ. ಪಾಪ, ಸ್ನಾನ ಮುಗಿಸಿ ತುಂಡು ಸೀರೆಯಿಂದ ಆವೃತರಾಗಿ ಬಿಕಿನಿಯನ್ನೋ, ಈಜುಡುಗೆಯನ್ನೋ ತೊಟ್ಟಂತೆ ಇರುತ್ತಿದ್ದ ಅವರ ಸ್ಥಿತಿ ದೇವರಿಗೆ ಪ್ರೀತಿ. ಆಗ ಗದರು ಹಾಕಿ ಕೂಗಿದಾಗ, ಸಹಾಯಕ್ಕೆ ಬರ್ತಾ ಇದ್ದದ್ದು ಚಿಳ್ಳೆ ಪಿಳ್ಳೆ ಪಾವು ಚಟಾಕುಗಳೇ. ಅಂದಿನ ಗಂಡಸರಿಗೆ ಈ ಸಮಸ್ಯೆ ಬರ್ತಾ ಇರಲಿಲ್ಲ. 'ಕೌಪೀನವಂತಃ ಖಲು ಭಾಗ್ಯವಂತ'ರಾಗಿರುತ್ತಿದ್ದ ಅವರು ರಾಜಾರೋಷವಾಗಿ ತಾವೇ ಮಡಿಕೋಲು ಹುಡುಕಿಕೊಂಡು ಬಿಡೋರು. ಪಾಪ ಹೆಂಗಸರಿಗೆ ಕಷ್ಟ. ಯಾರನ್ನು ದೂಷಿಸೋದು? ಹೀಗೆ ರಮಣಿಯರನ್ನು ರಮಣೀಯಾಕೃತಿಯರನ್ನಾಗಿ ಸೃಷ್ಟಿಸಿ, ಲಜ್ಜೆ, ಮಾನ ಮರ್ಯಾದೆಗಳ ಕಟ್ಟುಪಾಡನ್ನೂ ಹೊರೆಸಿ ಭೂಲೋಕಕ್ಕೆ ಅಟ್ಟಿರುವ ನಿಸರ್ಗವನ್ನೋ ಇಲ್ಲಾ ವಿಧಿಯನ್ನೋ ಬೈದುಕೊಂಡು ಸುಮ್ಮನಾಗ ಬೇಕು.

ಒಟ್ಟಿನಲ್ಲಿ ಮಡಿಕೋಲಿಗೆ ಮಡಿಬಟ್ಟೆ ಅಂದರೆ ಎಕ್ಸ್ಲೂಸಿವ್ ಆಗಿ ಕೆಲವರು ಮಾತ್ರವೇ, ಕೆಲವು ಕೆಲಸಗಳಿಗೆ ಮಾತ್ರವೇ, ದಿನದಲ್ಲಿ ಕೆಲವು ಗಂಟೆಗಳು ಮಾತ್ರವೇ ಉಪಯೋಗಿಸಬೇಕಾದ ಸೀರೆ, ಪಂಚೆ, ಅಂಗವಸ್ತ್ರ, ಕೆಲವೊಮ್ಮೆ ಲಂಗೋಟಿ, ಅಡುಗೆಮನೆ ಕೈ ಒರೆಸಿಕೊಳ್ಳುವ ಚೌಕ... ಈ ಎಲ್ಲವನ್ನೂ ಒಗೆದಾದಮೇಲೆ ಗಳುವಿನ ಮೇಲೆ ಒಣಗಿಸಲು ಸಹಾಯ ಮಾಡುವ ಕೆಲಸ, ಬೇಕಾದಾಗ